

ಹಿಮ್ಮೆಟ್ಟಿ ನಡೆವ ಒಬ್ಬ ಸಾಧಕಿ, ಅವಳಿಗೇ ಅರಿವಿಲ್ಲದಂತೆ ಅವನಿಗೆ ಖಳನಾಯಕಿಯಾಗಿಬಿಡುವುದು ಇದೇ ಕಾರಣಕ್ಕೆ.

ಇಷ್ಟಾಗಿ ಇದೊಂದು ಆದಿಕಾಲದ ಅಥವಾ ಪ್ರಾಚೀನ ನಡವಳಿಕೆ. ಪುರುಷರ ಸಂಸ್ಕಾರ ಎಷ್ಟೇ ಬೆಳೆದರೂ ಟೆಸ್ಟೋಸ್ಟಿನ್ ಹಾರ್ಮೋನು ಆತನಿಗೆ ತಾನು ಮೇಲಿರಬೇಕೆಂಬ ಹಂಬಲದಿಂದ ಪೈಪೋಟಿಗಿಳಿಯುವಂತೆ ಮಾಡುತ್ತದೆ. ಅದು ಎಲ್ಲಿ ನೇರವಾಗಿ ಸಾಧ್ಯವಿರುವುದಿಲ್ಲವೋ ಆಗ ಅವರು ಪರೋಕ್ಷ ಮತ್ತು ಹೀನಾಯ ದಾರಿಗಳನ್ನು ಅನುಸರಿಸಿ ಒಂದಿಷ್ಟು ಸಮಾಧಾನ ಪಟ್ಟುಕೊಳ್ಳುತ್ತಾರೆ.

## ಸಂಸಾರಗಳಲ್ಲಿ ಸಾಂಗತ್ಯ ಮರೀಚಿಕೆ?

ಸಂಗಾತಿಗಳ ವಿಚಾರಕ್ಕೆ ಬಂದಾಗ, ಯಶಸ್ವಿ ಮಹಿಳೆಯರ ನಿರೀಕ್ಷೆಗಳು ಹೆಚ್ಚಾಗುತ್ತವೆ. ಸಾಧನೆಗಳ ಹಾದಿಯಲ್ಲಿ ನಿರತಳಾದ ಮಹಿಳೆಗೆ ಅದೆಷ್ಟೋ ಬಾರಿ ತನಗೆ ಸರಿಹೊಂದುವ ವಿಶಾಲ ಹೃದಯದ ಸಂಗಾತಿಗಾಗಿ ಹುಡುಕಾಡಲು ಸಮಯ ಸಾಲದಿರಬಹುದು. ಈ ಕಾರಣಗಳಿಂದ ಮದುವೆಯಾಗದೇ ಒಂಟಿಯಾಗಿ ಉಳಿವ ಅದೆಷ್ಟೋ ಯಶಸ್ವಿ ಮಹಿಳೆಯರನ್ನು ನಾವು ಈ ಸಮಾಜದಲ್ಲಿ ನೋಡುತ್ತಿದ್ದೇವೆ.

ಯಶಸ್ವಿ ಮಹಿಳೆಯೆಂದಲ್ಲದಿದ್ದರೂ ಅವಳ ಹಣಕ್ಕೆ ಆಕರ್ಷಿತರಾಗುವ ಪುರುಷರಿದ್ದಾರೆ. ಯಶಸ್ವಿ ಮಹಿಳೆಯೊಬ್ಬಳನ್ನು ಅವಳ ಹಣಕ್ಕಾಗಿ ಪ್ರೀತಿಸಿ ಮದುವೆಯಾದವರು ಬಹುಕಾಲ ಅವಳೊಡನೆ ಇರಲಾಗದೇ ಹೋಗಬಹುದು.

ಹಣಕ್ಕಾಗಿಯೇ ತನ್ನನ್ನು ಪ್ರೀತಿಸುವ ನಾಟಕವಾಡುವ ಪುರುಷರನ್ನು ಇಂತಹ ಮಹಿಳೆಯರು ಶಂಕಿಸಲು ಶುರುಮಾಡಬಹುದು. ಅಥವಾ ಅವಳು ಹಾಗೆಂದುಕೊಂಡರೆ ಎನ್ನುವ ಸಂಕೋಚದಲ್ಲಿ ಹಲವರು ಹಿಂತೆಗೆಯಬಹುದು. ಹಾಗಾಗಿ ಅವಳಿಗೆ ನಿಜವಾದ ಪ್ರೀತಿ ದಕ್ಕದೆ ಅವಳು ವಿಚಲಿತಳಾಗಬಹುದು. ವಿಚ್ಛೇದನ ಪಡೆಯಬಹುದು. ಎಲ್ಲ ಅವಘಡಗಳಿಗೂ ಮಹಿಳೆಯತ್ತ ಬೊಟ್ಟು ಮಾಡುವ ಸಮಾಜ ಅವಳನ್ನು ಮತ್ತಷ್ಟು ಕ್ರೂರವಾಗಿ ನಡೆಸಿಕೊಂಡರೆ ಅವಳೊಬ್ಬ ಯಶಸ್ವಿ ಮಹಿಳೆಯಾಗಿಯೂ ಆಳವಾದ ಒಂಟಿತನಕ್ಕೆ ಜಾರಬಹುದು.

ವಿವಾಹ ಬಂಧನದಲ್ಲಿ ಉಳಿದಿದ್ದರೂ ಹಣವಿರುವ ಮಹಿಳೆಯನ್ನು ನಿಜಕ್ಕೂ ಪ್ರೀತಿಸಲು, ಗೌರವಿಸಲು ಪುರುಷ ಶಕ್ಯನಾಗದಿದ್ದರೆ ಆಗಲೂ ನೋಯುವುದು ಈ ಯಶಸ್ವಿ ಮಹಿಳೆಯರೇ. ಉದಾಹರಣೆಗೆ, ಏನನ್ನೋ ಸಾಧಿಸಿದ ಸಂತೋಷದಲ್ಲಿ, 'ಊಟಕ್ಕೆ ಒಂದು ಒಳ್ಳೆಯ ಹೋಟೆಲಿಗೆ ಹೋಗೋಣವಾ?' ಎಂದು ಮಹಿಳೆ ಕೇಳಿದರೆ 'ಬೇಕಾದಷ್ಟು ದುಡೀತಿದ್ದೀನಿ ಅಂತ ತೋರಿಸಲಿಕ್ಕಾ?' ಎಂದು ಕಟಕಿಯಾಡುವ ಗಂಡಂದಿರಿಗೇನು ಸಮಾಜದಲ್ಲಿ ಬರವಿಲ್ಲ. ಬೇಕೆಂದು ಪದೇ ಪದೇ ಅವಳ ಸಾಧನೆಗಳನ್ನು ಅಲ್ಲಗಳೆವ, ಮೂದಲಿಸುವ, ಅವಳ ಚರಿತ್ರೆಯನ್ನು ಶಂಕಿಸುವ ಪುರುಷರೂ ಇದ್ದಾರೆ. ಇಂತಹವರು ಹೆಂಡತಿಯ ದುಡ್ಡಿನಲ್ಲಿ ಸುಖವಾಗಿದ್ದುಕೊಂಡೇ ತಾವು ಅತ್ಯಂತ ದುಃಖಿಗಳೆಂದೂ, ಅದಕ್ಕೆ ಹೆಂಡತಿಯೇ ಕಾರಣವೆಂದೂ ಹೇಳಿಕೊಂಡು ಅವಳನ್ನು ಆಳ ದುಃಖಕ್ಕೆ ತಳ್ಳುವುದನ್ನೂ ನಾವು ನೋಡುತ್ತೇವೆ. 'ತಾಳಿ ಕಟ್ಟಿದ ನಾನು ನಿನ್ನ ಕೈ ಬಿಟ್ಟರೆ, ನಿನ್ನ ಸಾಧನೆ ಮೂರಾಬಟ್ಟೆಯಾಗುತ್ತದೆ' ಎಂದು ಹೆದರಿಸುವುದನ್ನೂ ಕೇಳಿದ್ದೇವೆ.

ತಮ್ಮ ಗಂಡಸ್ತನಕ್ಕೆ ಹೆಂಡತಿಯ ಸಾಧನೆಗಳಿಂದ ಪೆಟ್ಟು ಬಿದ್ದಿದೆಯೆಂಬ ಭ್ರಮೆಯಲ್ಲಿ ಅವಳನ್ನು ಮೂದಲಿಸಿಕೊಂಡು ಊರೆಲ್ಲ ಸುತ್ತಿ ಕಾಲಹರಣ ಮಾಡುತ್ತ, ಅನಿಶ್ಚಿತತೆಯ ದಳ್ಳುರಿಯಲ್ಲಿ ಕೊರಗುವ ಪುರುಷರ ವರ್ತನೆಗೆ ನಮ್ಮ ಸಮಾಜವೂ ತುಪ್ಪ ಸುರಿಯುತ್ತದೆ. ಅವನಿಗೆ 'ಅಯ್ಯೋ ಪಾಪ' ಎನ್ನುತ್ತ, ಸಂಸಾರದ ನೊಗ ಹೊತ್ತು ಕಾಡು ಹರಟೆಗೆ ಸಿಗದ ಮಹಿಳೆಯರನ್ನು 'ಕಳಂಕಿಣಿ'ಯೆಂದು ಜರಿಯಬಹುದು.

ಈ ಅನುಭವಗಳು ಮತ್ತು ಷಡ್ಯಂತ್ರಗಳು ಮಹಿಳೆಯರನ್ನು ಅಲುಗಾಡಿಸುತ್ತವೆ. ಯಾವ ಸಾಂಗತ್ಯವನ್ನೂ ನೀಡದ ಸಂಗಾತಿ ಸುಲಭ ಸುಖಗಳಿಗಾಗಿ ತನ್ನನ್ನು ಬಳಸಿಕೊಳ್ಳುತ್ತಿದ್ದಾನೆ ಎಂದು ಅರಿವಿರುವ ಮಹಿಳೆಯರು ಹೇಳಿಕೊಳ್ಳಲಾಗದ ಆಳವಾದ ಒಂಟಿತನದಲ್ಲಿ ಮುಂಗೋಪಿಗಳಂತೆ, ಅಸಂತೋಷಿಗಳಂತೆ, ಕಿರಿಕಿರಿಯ ಸ್ವಭಾವದವರಂತೆಯೂ ಪರಿವರ್ತಿತ ಆಗಬಹುದು. ಸಮಾಜ ನೋಡಬಯಸುವ ಉಗ್ರ ಅವತಾರಗಳಿಗೆ ಸ್ಥಿತ್ಯಂತರಗೊಳ್ಳಬಹುದು.

'ಒಂದಷ್ಟನ್ನು ಕೊಡುವ ಯಶಸ್ಸು ಮತ್ತು ಹಣ, ಮತ್ತಷ್ಟನ್ನು ಕಸಿದುಕೊಳ್ಳುತ್ತದೆ' ಎನ್ನುವುದು ಮೇಲ್ನೋಟಕ್ಕೆ ನಿಜವೆನಿಸಿದರೂ ಇಂತಹ ಘಟನೆಗಳ ಹಿಂದೆ ಮಹಿಳೆಗಿಂತ ತಾನು ಯಾವಾಗಲೂ ಮೇಲಿರಬೇಕು ಎಂದು ಬಯಸುವ ಗಂಡಸಿನ ಪ್ರಬಲ ಇಚ್ಛೆಯೇ ಕೆಲಸ ಮಾಡುವುದನ್ನು ನಾವು ಸುಲಭವಾಗಿ ನೋಡಬಹುದು. ಅವಳ ಜೊತೆ ಹಾಸಿಗೆಯಲ್ಲಿರುವುದಕ್ಕೆ ಅಥವಾ ಕೆಲಸಗಳಲ್ಲಿ ಅವಳ ಬಾಲಂಗೋಚಿಯಂತೆ ಓಡಾಡಿಕೊಂಡಿರುವುದನ್ನು ಆಳವಾಗಿ ದ್ವೇಷಿಸುವ ಪುರುಷರು ಅದೇ ರೀತಿಯ ಹೆಂಡತಿಯಿದ್ದರೆ ಸುಖವನ್ನು ಅನುಭವಿಸುವುದರ ಹಿಂದಿನ ಗುಟ್ಟೂ ಅದೇ ಆಗಿರುತ್ತದೆ ಎಂಬುದನ್ನು ನಾವು ಮನಗಾಣಬಹುದು. ಒಟ್ಟಿನಲ್ಲಿ ಸಂಗಾತಿ ಶಕ್ತಳಾಗಿರಬಾರದು ಎಂಬ ಅಸಹಿಷ್ಣುತೆ ಪುರುಷರ ಚಿತ್ತದ ಮೇಲೆ ಅಪಾರ ಪ್ರಭಾವ ಹೊಂದಿದ್ದು ಅದು ಕಾಣೆಯಾಗಲು ಬಹುಕಾಲದ ಪರಿವರ್ತನೆಗಳ ಅಗತ್ಯವಿದೆ.

## ಕೆಲಸದಲ್ಲಿನ ಒಂಟಿತನ

ವೈಯಕ್ತಿಕ ಬದುಕಿನಲ್ಲಷ್ಟೇ ಅಲ್ಲದೆ ಕೆಲಸ ಮತ್ತು ವೃತ್ತಿಯಲ್ಲಿಯೂ ಸಾಧಕ ಮಹಿಳೆಯರು ಒಂಟಿತನ ಅನುಭವಿಸುತ್ತಾರೆ. ಕೈ ಕೆಳಗಿನ ಮಹಿಳೆಯರನ್ನು ಸಹಿಸಿಕೊಳ್ಳುವ ಪುರುಷರು ಅವರ ಸಮಾನ ಸ್ಥಾನ ಅಥವಾ ಅವರಿಗಿಂತ ಹಿರಿಯ ಹುದ್ದೆಯಲ್ಲಿರುವ ಮಹಿಳೆಯರನ್ನು ಸಹಿಸಿಕೊಳ್ಳಲು ಹೆಣಗುತ್ತಾರೆ. ಕೆಲಸದಲ್ಲಿ ಆ ಮಹಿಳೆ ತನಗಿಂತ ಉತ್ತಮಳು ಎಂದು ಗೊತ್ತಿದ್ದೂ ಅಸಹನೆ ತೋರುತ್ತಾರೆ. ಇಲ್ಲವೇ ಹಿಂದಿನಿಂದ ಚಾರಿತ್ರ್ಯವಧೆಗೆ ಇಳಿಯುತ್ತಾರೆ.

ಒಬ್ಬ ಸಾಧಕಿಯ ದೇಹದ ಬಗ್ಗೆ ಹೀನಾಯವಾಗಿ ಮಾತಾಡುವ ಜನ ಒಬ್ಬ ಸಾಧಕನ 'ಬಾಡಿ ಶೇಮಿಂಗ್' ಮಾಡಲು ಹಿಂದೆಗೆಯುತ್ತಾರೆ. ಅದುವರೆಗೆ ಸ್ನೇಹಿತರಾಗಿದ್ದವರು ಮಹಿಳೆ ಹುದ್ದೆಗೇರಿದ ಕೂಡಲೇ ಅವಳನ್ನು 'ಅನ್‌ಫ್ರೆಂಡ್' ಮಾಡಿಬಿಡುತ್ತಾರೆ. ಬಾರಿಗೋ ಪಬ್ಬಿಗೋ ರಾತ್ರಿಯ ವೇಳೆ ಹೋಗಿ ಕುಳಿತು ಕುಡಿಯದಿದ್ದರೆ ಮಹಿಳೆಯರು ಅವರ ಪಾಲಿನ ಸಮೀಪದ ವರ್ತುಲದಿಂದ ಹೊರಗೆಸೆಯಲ್ಪಡುತ್ತಾರೆ. ಇನ್ನು ಕುಳಿತು ಕುಡಿದರೆ ಅಂತಹ ಮಹಿಳೆಯರನ್ನು ಜೊತೆಗೆ ಕುಳಿತು ಕುಡಿದವರು 'ನಡತೆಗೆಟ್ಟವಳೆಂದು' ಸುದ್ದಿ ಹಬ್ಬಿಸಿ ನಗೆಪಾಟಲು ಮಾಡಲು ಹಿಂಜರಿಯುವುದಿಲ್ಲ.

ಒಟ್ಟಿನಲ್ಲಿ ಕೆಲವೊಂದು ವಿಚಾರಗಳಿಗೆ ನೀನು ಸರಿಸಮಳಲ್ಲ ಎನ್ನುವ ಅವಿರತ ಪರೋಕ್ಷ ಸಂದೇಶ, ಸಂದೇಹ ಮತ್ತು ಟೀಕೆಗಳು ಅವಳೆಡೆಗೆ ತೂರಲ್ಪಡುತ್ತವೆ. ಸಾಧನೆಯ ಮೆಟ್ಟಿಲುಗಳನ್ನು ಏರಿದ ಮಹಿಳೆಗೆ ಬೆಂಬಲದ ಅಗತ್ಯ ಇನ್ನೂ ಹೆಚ್ಚಿರುತ್ತದೆ. ಆಕೆ ನಂಬಬಹುದಾದ ಪ್ರಾಮಾಣಿಕ ಸ್ನೇಹಿತ ಸಹೋದ್ಯೋಗಿಗಳ ಅಗತ್ಯ ಅವಳಿಗೆ ಹೆಚ್ಚಾದಷ್ಟೂ ಅವಳು ಬೆದರಿ ಇನ್ನಷ್ಟು ಏಕಾಗ್ರಚಿತ್ತಳಾಗಿ ಗಂಭೀರಳಾಗದೇ ಬೇರೆ ದಾರಿಯಿರುವುದಿಲ್ಲ. ಆದರೆ, ಹಾಗೇನಾದರೂ ಅವಳು ಒಳಮುಖಳಾದರೆ ಅವಳು 'ಸೀರಿಯಸ್'